ಧ್ವನಿಗೂಡಿಸಬೇಕು ಎನ್ನುವ ಪ್ರಜ್ಞೆ ಮೂಡಿತು.

ಕರ್ನಾಟಕದಲ್ಲಿ ಮದ್ಯಪಾನ ನಿಷೇಧ ಕುರಿತ ಮಹಿಳೆಯರ ಚಳವಳಿಗಳನ್ನು ಮುಖ್ಯವಾಗಿ ನೋಡಬಹುದು. ಕರ್ನಾಟಕದಾದ್ಯಂತ ಹಲವಾರು ಕಡೆಗಳಲ್ಲಿ ಮದ್ಯ ನಿಷೇಧಕ್ಕೆ ಹೋರಾಟಗಳು ನಡೆದಿವೆ. ಆದರೆ, 2005ರಲ್ಲಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕರೂರು ಹೋಬಳಿಯಲ್ಲಿ 'ನಮ್ಮೂರಿಗೆ ಸಾರಾಯಿ ಬೇಡ' ಎನ್ನುವ ಚಳವಳಿ ನಡೆದಿದೆ. ಬಹಳ ಸಂಘಟಿತವಾಗಿ, ಮಹಿಳೆಯರೇ ಮುಂದೆ ನಿಂತು ನಡೆಸಿದ ಹೋರಾಟವಿದು.

ಕೇಂದ್ರ ಸರ್ಕಾರದ ಪೌರತ್ವ (ತಿದ್ದುಪಡಿ) ಕಾಯ್ದೆ ಜಾರಿಯಾದ ನಂತರ, ದೇಶದಲ್ಲಿ ಒಂದು ಹೊಸ ಅಲೆ ಎದ್ದಿದೆ. ಸರ್ಕಾರದ ವಿರುದ್ಧದ ಹೋರಾಟದಲ್ಲಿ ಮಹಿಳೆಯರೇ ಹೆಚ್ಚು ಸಕ್ರಿಯರಾಗಿದ್ದಾರೆ. ಜಾಮಿಯಾ ಮಿಲಿಯಾ ವಿಶ್ವವಿದ್ಯಾಲಯದಲ್ಲಿ ನಡೆದ ಪ್ರತಿಭಟನೆ ವೇಳೆ, ನಮ್ಮ ಸಹಪಾಠಿಗೆ ಪೊಲೀಸರು ಲಾಠಿ ಬೀಸಲಿ ಬಂದಾಗ ಇಬ್ಬರು ಮುಸ್ಲಿಂ ಯುವತಿಯರು ತೋರಿದ ಧೈರ್ಯ. ಜೆಎನ್‌ಯು ವಿಶ್ವವಿದ್ಯಾಲಯದ ಒಳಗೆ ಮುಸುಕುಧಾರಿಗಳು ನುಗ್ಗಿದಾಗ ಪೆಟ್ಟು ತಿಂದ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಆಯಿಷಿ ಘೋಷ್ ಸೇರಿದಂತೆ ಹಲವು ಯುವತಿಯರು. ದೇಶದ ನಾನಾ ಭಾಗಗಳಲ್ಲಿ ನಡೆದ ಮತ್ತು ನಡೆಯುತ್ತಿರುವ ಪ್ರತಿಭಟನೆಗಳಲ್ಲಿ ಮಹಿಳೆಯರು ಭಾಗವಹಿಸುತ್ತಿರುವುದು ಎಲ್ಲವೂ ಬದಲಾಗುತ್ತಿರುವ ಹೋರಾಟದ ಬಗ್ಗೆಯೇ ಸರಿ.

ಇತ್ತೀಚೆಗೆ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಿರಿಯ ಪತ್ರಕರ್ತೆ ಆರ್. ಪೂರ್ಣಿಮಾ ಅವರು, 'ಇಂದಿನ ಮಹಿಳಾ ಹೋರಾಟಗಳ ಕುರಿತು ಸಾಮಾಜಿಕ ಅಧ್ಯಯನಕ್ಕೆ ಮುಂದಾಗಬೇಕು' ಎಂದಿದ್ದರು. ಇದು ನಿಜಕ್ಕೂ ಆಗಬೇಕಾಗಿದೆ. ಶಾಹೀನ್‌ಬಾಗ್‌ನ ಹೋರಾಟವಂತೂ ಬಹುಶಃ ಮಹಿಳಾ ಚಳವಳಿಗಳ ಇತಿಹಾಸದಲ್ಲಿ ಹೊಸ ಶಕೆ ಎಂದೇ ಕರೆಯಬೇಕು. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ, ಇಷ್ಟೊಂದು ದಿನಗಳ ಕಾಲ ನಡೆಯುವುದು ಎನ್ನುವುದು ಸಣ್ಣ ವಿಷಯವಲ್ಲ. ಎಲ್ಲ ವರ್ಗದ ಎಲ್ಲ ಸಮುದಾಯದ, ಧರ್ಮದ ಹೆಣ್ಣು ಮಕ್ಕಳು ಒಟ್ಟಿಗೆ ಸೇರಿರುವುದು ಆಶಾದಾಯಕವೇ. 'ಸಿಎಎ' ವಿರುದ್ಧ ಹೋರಾಟದಲ್ಲಿ ಮಹಿಳೆಯರು ಅದರಲ್ಲೂ ಯುವತಿಯರು ಅತಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಿರುವುದು ನಿಜಕ್ಕೂ ಪಾಸಿಟಿವ್ ಆದ ಬೆಳವಣಿಗೆ.

ಆದರೆ, ಕೇವಲ ಚಳವಳಿಗಳ ಹೆಸರುಗಳನ್ನು ಪಟ್ಟಿ ಮಾಡುವುದು ಅರ್ಥಹೀನ ಎನಿಸುತ್ತದೆ. ಇಂಥ ಹೊಸ ಬೆಳವಣಿಗೆಯ ಮಧ್ಯೆಯೂ, ಗಮನಿಸಲೇಬೇಕಾದ ಸೂಕ್ಷ್ಮ ಸಂಗತಿಗಳು ಸಾಕಷ್ಟಿವೆ. ಆತ್ಮಾವಲೋಕನದ ಅಂಶಗಳೂ ಇವೆ.

ಮಹಿಳಾ ಹೋರಾಟಗಳಿಂದ ನಾಯಕಿಯರು ಯಾಕೆ ಹುಟ್ಟಿಕೊಳ್ಳುತ್ತಿಲ್ಲ. ಅದಕ್ಕಿರುವ ಕಾರಣಗಳೇನು. ಹೋರಾಟದ ಮುಂದಾಳತ್ವ ವಹಿಸುವುದು ಬೇರೆ, ಅದಕ್ಕಾಗಿ ಕೆಲಸ ಮಾಡುವುದು, ಭಾಗವಹಿಸುವುದು ಬೇರೆ. ಆದರೆ, ಅದು ರಾಜಕೀಯವಾಗಿಯಾದರೂ ಸರಿ, ಸಾಮಾಜಿಕ ನಾಯಕತ್ವವಾದರೂ ಸರಿ. ಸಂಘಟನೆಗಳನ್ನು ಕಟ್ಟಿಕೊಂಡು, ಪ್ರತಿಭಟನೆ, ಪ್ರತಿಕಾಗೋಷ್ಠಿ, ಸಮಾವೇಶಗಳನ್ನು ಮಾಡುವುದು, ಸುದ್ದಿವಾಹಿನಿಯ ಚರ್ಚೆಗಳಲ್ಲಿ ಭಾಗವಹಿಸುವುದು ಬಿಟ್ಟರೆ, ಇವರನ್ನು ನಾವು ಅನುಸರಿಸಬಹುದು; ಇವರು ನಮ್ಮ ಮಾರ್ಗದರ್ಶಕರು ಎನ್ನುವ ಯಾವ ನಾಯಕತ್ವವೂ ಕಾಣುತ್ತಿಲ್ಲ.

ಶಬರಿಮಲೆ ದೇವಸ್ಥಾನ ಪ್ರವೇಶಕ್ಕೆ ತೋರುವ ಛಲ, ಉತ್ಸಾಹ, ಹಟ ಸಂಸತ್ತಿನ ಪ್ರವೇಶಕ್ಕೆ ಯಾಕೆ ತೋರುತ್ತಿಲ್ಲ. ಹಾಗಾದರೆ ನಮ್ಮ ಆದ್ಯತೆ ಯಾವುದಾಗಬೇಕು. ಇದನ್ನು ನಾವು ಪ್ರಶ್ನಿಸಿಕೊಳ್ಳಬೇಕಾಗುತ್ತದೆ. ಹೌದು, ಶಬರಿಮಲೆ ದೇವಸ್ಥಾನ ಪ್ರವೇಶ ಎನ್ನುವುದು, ಧಾರ್ಮಿಕ ಮೂಲಭೂತವಾದಕ್ಕೆ ವಿರುದ್ಧವಾದ ಹೋರಾಟವೇ ಸರಿಯಾದರೂ, ಅದಕ್ಕಿಂತ ಮುಖ್ಯ ಆದ್ಯತೆ ನಮಗೆ ಸಂಸತ್ತಿನ ಪ್ರವೇಶ ಆಗಬೇಡವೇ? ಶಾಸನ ಸಭೆಗಳ ಸ್ಥಾನಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ ಸಂಸತ್ತಿನಲ್ಲಿ ಹಾಗೆಯೇ ಇದೆ.

ಈ ಕುರಿತು ಇರುವ ಕೆಲವೇ ಕೆಲವು ಮಹಿಳಾ ರಾಜಕಾರಣಿಗಳು ಆಗೀಗೊಮ್ಮೆ ಮಾತನಾಡಿದರೂ, ಅದು ಚಳವಳಿಯ ರೂಪ ಪಡೆಯಲಿಲ್ಲ. ಇಲ್ಲೂ ಮತ್ತದೇ ನಾಯಕತ್ವದ ಕೊರತೆ ಎದ್ದು ಕಾಣುತ್ತದೆ. ನಮ್ಮ ದೇಶದ ಪ್ರಧಾನಿ, ಮಹಿಳಾ ಸಂಸದೆಯ ನಗುವನ್ನು ಸಂಸತ್ತಿನಲ್ಲಿ ಅಪಹಾಸ್ಯ ಮಾಡುತ್ತಾರೆ. ಇದರ ಕುರಿತು ಸಂಸತ್ತಿನಲ್ಲೇ ಎಷ್ಟು ಪ್ರತಿರೋಧ ವ್ಯಕ್ತವಾದವು? ವಿಪರ್ಯಾಸ ಎಂದರೆ, ಅಷ್ಟೊಂದು ಚರ್ಚೆಯೇ ನಡೆಯಲಿಲ್ಲ.

ನಮ್ಮನ್ನು ನಾವು ಆಳಿಕೊಳ್ಳುವ, ನಮ್ಮ ಕಾನೂನನ್ನು ನಾವೇ ರೂಪಿಸಿಕೊಳ್ಳುವ ಇಂತಹ ಸುವರ್ಣ ಅವಕಾಶವನ್ನು ನಾವು ಕೈಚೆಲ್ಲಿ ಕುಳಿತಿದ್ದೇವೆ. ನಮಗೆ ಸಂಸತ್ತಿಗೆ ಹೋಗುವುದರಿಂದ ಆಗುವ ಅನುಕೂಲದ ಮಾಹಿತಿಯೇ ಇಲ್ಲದಿದ್ದರೆ ಪ್ರತಿರೋಧ ಹುಟ್ಟುವುದಾದರೂ ಹೇಗೆ.

'ಸಿಎಎ' ವಿರುದ್ಧ ಮಹಿಳೆಯರು ನಡೆಸುತ್ತಿರುವ ಚಳವಳಿಯು ಹೊಸ ಆರಂಭ. ಈ ಚಳವಳಿಗಳ ಫಲ, ಪರಿಣಾಮ ಏನೇ ಇದ್ದರೂ, ಇದರ ಹೋರಾಟದ ಗುಣವನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಮತ್ತು ಅನಿವಾರ್ಯತೆ ಇದೆ. ■




## ಮಹಿಳೆ-ಚಳವಳಿ

ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರದಲ್ಲಿ ನಡೆದ ಅಪ್ಪಿಕೋ ಚಳವಳಿ, ಅಘನಾಶಿನಿ–ಬೇಡ್ತಿ ಚಳವಳಿ, ಪಶ್ಚಿಮಘಟ್ಟ ಉಳಿಸಿ ಚಳವಳಿ, ಸೊರಬದ ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆ ವಿರುದ್ಧ ನಡೆದ ಚಳವಳಿ ಹೀಗೆ ಹಲವಾರು ಸಾಮಾಜಿಕ ಕಳಕಳಿಯುಳ್ಳ ಚಳವಳಿಗಳಲ್ಲಿ ಮಹಿಳೆಯರ ಪಾತ್ರ ದೊಡ್ಡದಿದೆ.